ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಾಮುಖ್ಯ ಆದ್ದು. [ನಂ 19.

ಬೆಂಗಳೂರು, ಗುರುವಾರ, ಮೇ ತಾ॥ 14, ಸ॥ 1903.

IIನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಜೀಫ್ ಜಡ್ಜ್‌ರು ಮತ್ತೆರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಎಕ್ಸೈಜ್ ಇಲಾಖೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ, ಸ॥ 1903—1904ನೇ ಸರ್ಕಾರಿ ವರುಷಕ್ಕಾಗಿ ಮೈಸೂರು ರಾಜ್ಯದಲ್ಲಿ ಕೇಂದಿ ಉತಾರ್ಮಾಡಲಿಕ್ಕೆ ಎಲ್ಲಾ ಮುರಗಳು ಹಸರು ಬಣ್ಣದಿಂದ ಸಂಖ್ಯೆ ಹಾಕಲ್ಪಡುವವು.

ಪಿ. ಎಸ್. ಪೂರ್ಣಯ್ಯ,
ಮೈಸೂರು ಕೇಮೆಯ ಎಕ್ಸೈಜ್ ಕಮ್ಮಿಷನರ್.

ಫಾರೆಸ್ಟ್ ಇಲಾಖೆ.

ನೋಟಿಫಿಕೇಷನ್, ತಾರೀಖು 22ನೇ ಏಪ್ರೆಲ್ 1903ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಕ್ಲೋಸ್‌ಪೇಟೆ ರೇಂಜ್ ಸಾರ್ವದುರ್ಗ ಮತ್ತು ಹಂದಿಗೊಂದಿ ಸ್ಟೇಟ್ ಫಾರೆಸ್ಟ್ಗಳಲ್ಲಿ ಇರುವ ಪಪ್ಪಿಚಕ್ಕೆಯನ್ನು ಫ॥ 1—1—1904ರ ವರಗೆ ರೂಢಿಸಲು 30—5—1903ರಲ್ಲಿ ಡಿ॥ ಫಾ॥ ಆಫಿಸರವರಿಂದ ಅಥವಾ ರೇಂಜ್ ಆಫಿಸರವರಿಂದ ಕ್ಲೋಸ್ಪೇಟೆಯಲ್ಲಿ ಹರಾಜು ಹಾಕಲ್ಪಡುವದು.

ಷರತ್ತುಗಳು.—1. ಚೆಡದರಖಾಸ್ತುದಾರನು ಹರಾಜು ಖೈದಾದಕೂಡ್ಲೆ ಕಾಲುಹಿಸ್ಸೆ ವೊಬಲಗನ್ನು ಹಾಜರ್ಮಾಡಬೇಕು. ಬಾಕಿ ಮುಕ್ಕಾಲು ಹಿಸ್ಸೆ ವೊಬಲಗನ್ನು ಡಿ॥ ಫಾ॥ ಆಫಿಸರವರಿಂದ ಕೊಡೋಣಾಗುವ ಆಡ್ವೈಸ್ ವೇರೆ ಸವಿಾಪದಲ್ಲಿರುವ ತಾಲ್ಲೂಕು ಟ್ರೆಜರಿಗೆ ಹರಾಜು ತಾರೀಖು ಲಾಗಾಯತು ಮೂರು ದಿವಸದಲ್ಲಿ ಪೂರತಿ ಮಾಡಬೇಕು. ಹಾಗೆ ಮಾಡಲು ತಪ್ಪಿದಲ್ಲಿ ಡಿಪಾಜಿಟ್ಟು ವೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಬಾಬು ಪುನಹ ಹರಾಜ್ಮಾಡಲ್ಪಡುವದು.

2. ಮೇಲ್ಕಂಡಂತೆ ನಡಿಸಲ್ಪಡುವ ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಹಣ ಕೊಡಲು ತಪ್ಪುದ ಅವಲ್ ಚೆಡದರೆ ಖಾಸ್ತುದಾರನು ಗುರಿಯಾಗತಕ್ಕದ್ದು. ದುಸರಾ ಹರಾಜಿನಲ್ಲಿ ಜಾಸ್ತಿ ವೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ವೊಬಲಿಗೆ ಅವಲ್ ಚೆಡದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲ. ಆದರೆ ದುಸರ ಹರಾಜಿನಲ್ಲಿ ಹುಟ್ಟುವ ವೊಬಲಗು ವೊದಲಿನ ಹರಾಜು ವೊಬಲಿಗ್ಗೆ ಕಮ್ಮಿಯಾದಲ್ಲಿ ಆರೀತಿ ಕಮ್ಮಿ ಆಗುವ ನೊಬಲಗನ್ನು ಅವಲ್ ದರಖಾಸ್ತುದಾರನು ಪೂರತಿ ಮಾಡಲು ಬದ್ಧನಾಗಿರುತ್ತಾನೆ.

3. ಸದರಿ ಚಕ್ಕೆಯನ್ನು ಡಿ॥ ಫಾ॥ ಆಫಿಸರವರಿಂದ ಕೊಡೋಣಾಗುವ ಲೈಸೆನ್ಸು ವೇರೆ ಅದರಲ್ಲಿ ನಮೂದಾಗುವ ವಾಯಿದೆ ಅಂದರ್‌ವಾರ್ ಸಾಗಿಸಿಕೊಳ್ಳಬೇಕು.

4. ಸೂರ್ಯ ಅಸ್ತಮಾನವಾದ ನಂತರ ಮತ್ತು ಸೂರ್ಯ ಉದಯವಾಗುವದಕ್ಕೆ ಪೂರ್ವದಲ್ಲಿ ಸ್ಟೇಟ್ ಫಾರೆಸ್ಟ್ನ ಸರಹದ್ದಿನಿಂದ ಯಾವ ಮರಗಳು ಸಾಗಿಸಲ್ಪಡಕೂಡದು.

5. ಗುತ್ತಾದಾರನು, ಬಳ್ಳಿ ಯಾ ತಾಯಿಬೇರಿಗೆ ಇಜಾ ಇಲ್ಲದಂತೆ ಪಕ್ಕದ ಬೇರುಗಳಲ್ಲಿ ಮಾತ್ರ ಚಕ್ಕೆಯನ್ನು ರೂಢಿಸಿಕೊಳ್ಳಬೇಕು.

6. ಕಂಟ್ರಾಕ್ಟುದಾರ ಅಥವಾ ಅವರ ಆಳುಗಳ ಅಜಾಗರೂಕತೆಯಿಂದ ಫಾರೆಸ್ಟ್‌ನಲ್ಲಿ ಬೆಂಕಿ ಸಂಭವಿಸಿದರೆ ಅವರನ್ನೇ ಶಿಕ್ಷೆಗೆ ಗುರಿಪಡಿಸಲಾಗುತ್ತದೆ.

7. ಕಂಟ್ರಾಕ್ಟುದಾರನು ಚೆಕ್ಕೆ ರೂಢಿಸುವದರಲ್ಲಿ ತಾಯಿಬೇರಿನಲ್ಲಿ ತೆಗಿಯದೆ ಪಕ್ಕದ ಬೇರುಗಳಲ್ಲಿ ತೆಗದುಕೊಳ್ಳಬೇಕು.